**All India Radio: Bangalore**
**National Bulletin In Kannada**
**09.08.2026  7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**09.08.2026  7.35 am**

**<>><><*><><<>**

ಮುಖ್ಯಾಂಶಗಳು

**೧. ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಮಾತುಕತೆ**

**೨. ದೇಶಾದ್ಯಂತ ಇಂದಿನಿಂದ 'ಹರ್ ಘರ್ ತಿರಂಗಾ ಅಭಿಯಾನ' ಆರಂಭ**

**೩. ಕೋಟ್ ಡಿ'ಐವರಿ ಅಧ್ಯಕ್ಷರೊಂದಿಗೆ ಸಚಿವ ಕೀರ್ತಿ ವರ್ಧನ್ ಸಿಂಗ್ ಮಾತುಕತೆ**

**೪. ಪ್ರತಿಕೂಲ ಹವಾಮಾನ; ಇಂದಿನಿಂದ ವಾರ್ಷಿಕ ಅಮರನಾಥ ಯಾತ್ರೆ ಸ್ಥಗಿತ**

**೫. ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್; ಅಶ್ಮಿತಾ ಚಾಲಿಹಾ-ಕ್ಯೂ ಹಾನ್ ನಡುವಿನ ಮಹಿಳಾ ಸಿಂಗಲ್ಸ್ ಫೈನಲ್ ಪಂದ್ಯ ಪ್ರಗತಿಯಲ್ಲಿ**

**<>><><*><><<>**

ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರೊಂದಿಗೆ ದೂರವಾಣಿ ಮೂಲಕ ಪ್ರಧಾನಿ ನರೇಂದ್ರ ಮೋದಿ ಮಾತುಕತೆ ನಡೆಸಿದ್ದಾರೆ. ಪ್ರಮುಖ ಕ್ಷೇತ್ರಗಳಲ್ಲಿ ಭಾರತ-ಅಮೆರಿಕ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಿಷ್ಠಗೊಳಿಸುವ ಮಾರ್ಗಗಳ ಬಗ್ಗೆ ಚರ್ಚಿಸಲಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ವ್ಯಾಪಾರ, ರಕ್ಷಣೆ, ನಿರ್ಣಾಯಕ ಮತ್ತು ಉದಯೋನ್ಮುಖ ತಂತ್ರಜ್ಞಾನಗಳು, ಇಂಧನ ಭದ್ರತೆ ಮತ್ತು ನಿರ್ಣಾಯಕ ಖನಿಜಗಳಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಬದ್ಧತೆಯನ್ನು ಉಭಯ ನಾಯಕರು ಪುನರುಚ್ಚರಿಸಿದರು. ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ಇಬ್ಬರೂ ನಾಯಕರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು.

**<>><><*><><<>**

ಹರ್ ಘರ್ ತಿರಂಗಾ ಅಭಿಯಾನ ಇಂದು ಪ್ರಾರಂಭವಾಗಲಿದ್ದು, ಈ ತಿಂಗಳ ೧೭ ರವರೆಗೆ ನಡೆಯಲಿದೆ. ದೇಶದ ನಾಗರಿಕರು, ರಾಷ್ಟ್ರ ಧ್ವಜವನ್ನು ಹಾರಿಸಲು ಹಾಗೂ ದೇಶಭಕ್ತಿ, ರಾಷ್ಟ್ರೀಯ ಏಕತೆ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಆಚರಿಸುವ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು ಈ ಉಪಕ್ರಮದ ಗುರಿಯಾಗಿದೆ. ಈ ವರ್ಷದ ಅಭಿಯಾನವು ಭಾರತದ ರಾಷ್ಟ್ರೀಯ ಗೀತೆ "ವಂದೇ ಮಾತರಂ" ನ ೧೫೦ನೇ ವಾರ್ಷಿಕೋತ್ಸವದೊಂದಿಗೆ ಹೊಂದಿಕೆಯಾಗುವುದರಿಂದ ವಿಶೇಷ ಮಹತ್ವವನ್ನು ಹೊಂದಿದೆ. ಇದು ದೇಶಭಕ್ತಿಯ ವಿಶಿಷ್ಟ ಆಚರಣೆಯಲ್ಲಿ ರಾಷ್ಟ್ರ ಧ್ವಜ ಮತ್ತು ರಾಷ್ಟ್ರೀಯ ಗೀತೆಯನ್ನು ಒಟ್ಟುಗೂಡಿಸುತ್ತದೆ. ಆಚರಣೆಗಳ ಭಾಗವಾಗಿ, ದೇಶಾದ್ಯಂತ ವಂದೇ ಮಾತರಂನ ಸಾಮೂಹಿಕ ಗಾಯನವನ್ನು ಆಯೋಜಿಸಲಾಗುತ್ತದೆ. ೨೦೦ ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು, ಹೈಕಮಿಷನ್‌ಗಳು ಮತ್ತು ದೂತಾವಾಸ ಕಚೇರಿಗಳು ಅಭಿಯಾನವನ್ನು ಗುರುತಿಸಲು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಿವೆ. ವಿಶೇಶವಾಗಿ 'ಸೂರ್ಯ ಪಥ ತಿರಂಗಾ' ಡಿಜಿಟಲ್ ರಿಲೇ ಆಗಸ್ಟ್ ೧೫ ರಂದು ಫಿಜಿಯಲ್ಲಿರುವ ಭಾರತದ ರಾಜತಾಂತ್ರಿಕ ಕಚೇರಿಯಿಂದ ಪ್ರಾರಂಭವಾಗಿ ಸ್ಯಾನ್ ಫ್ರಾನ್ಸಿಸ್ಕೋದ ಭಾರತೀಯ ಕಾನ್ಸುಲೇಟ್ ಜನರಲ್‌ನಲ್ಲಿ ಮುಕ್ತಾಯಗೊಳ್ಳುತ್ತದೆ.

**<>><><*><><<>**

ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರು ನಿನ್ನೆ ಅಬಿಡ್ಜಾನ್‌ನಲ್ಲಿ ಕೋಟ್ ಡಿ'ಐವರಿ ಅಧ್ಯಕ್ಷ ಅಲಸ್ಸೇನ್ ಔಟ್ಟಾರ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಬೆಳೆಯುತ್ತಿರುವ ಭಾರತ-ಕೋಟ್ ಡಿ'ಐವರಿ ಪಾಲುದಾರಿಕೆಯ ಕುರಿತು ಉಭಯ ನಾಯಕರು ಚರ್ಚಿಸಿದರು. ಆಫ್ರಿಕಾದೊಂದಿಗೆ ಬಲವಾದ ಮತ್ತು ಆಳವಾದ ಸಂಬಂಧವನ್ನು ಮುಂದುವರಿಸಲು ಭಾರತದ

ಹಂಚಿಕೆಯ ಬದ್ಧತೆಯನ್ನು ಪುನರುಚ್ಚರಿಸಿದರು. ಭಾರತ-ಕೋಟ್ ಡಿ'ಐವರಿ ನಡುವಿನ ದೀರ್ಘಕಾಲದ ಸ್ನೇಹವನ್ನು ಮತ್ತಷ್ಟು ಬಲಪಡಿಸಲು ಮತ್ತು ವೈವಿಧ್ಯಮಯ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಉಭಯ ನಾಯಕರು ಚರ್ಚೆ ನಡೆಸಿದರು.

**<>><><*><><<>**

ಜಮ್ಮು ಮತ್ತು ಕಾಶ್ಮೀರದಲ್ಲಿ, ಇತ್ತೀಚಿನ ಮಳೆ, ಯಾತ್ರಾ ಮಾರ್ಗದ ದುರಸ್ತಿ ಕಾರ್ಯ ಹಾಗೂ ಮುಂದಿನ ಕೆಲವು ದಿನಗಳಲ್ಲಿ ಪ್ರತಿಕೂಲ ಹವಾಮಾನದ ಮುನ್ಸೂಚನೆಯಿಂದಾಗಿ ಪಹಲ್ಗಾಮ್ ಮತ್ತು ಬಾಲ್ಟಾಲ್ ಮಾರ್ಗಗಳಲ್ಲಿ ಇಂದಿನಿಂದ ವಾರ್ಷಿಕ ಅಮರನಾಥ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ. ಹಳಿಗಳ ಸ್ಥಿತಿ ಮತ್ತು ಭಾರತ ಹವಾಮಾನ ಇಲಾಖೆ ಹೊರಡಿಸಿದ ಹವಾಮಾನ ಮುನ್ಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ರಂಬನ್ ಜಿಲ್ಲೆ ಮತ್ತು ಕಾಶ್ಮೀರದ ಕೆಲವು ಭಾಗಗಳಲ್ಲಿ ಮಳೆ ಮತ್ತು ಪ್ರತಿಕೂಲ ಹವಾಮಾನದ ನಡುವೆ ಮುನ್ನೆಚ್ಚರಿಕೆ ಕ್ರಮವಾಗಿ ನಿನ್ನೆ ಜಮ್ಮುವಿನ ಭಗವತಿನಗರ ಮೂಲ ಶಿಬಿರದಿಂದ ಯಾವುದೇ ಹೊಸ ಯಾತ್ರಾ ಬೆಂಗಾವಲು ಹೊರಡಲು ಅವಕಾಶ ನೀಡಲಾಗಿಲ್ಲ. ಏತನ್ಮಧ್ಯೆ, ಪವಿತ್ರ ಗುಹೆಯಲ್ಲಿ ದರ್ಶನ ಮುಗಿಸಿ ಬಾಲ್ಟಾಲ್ ಮೂಲ ಶಿಬಿರದಲ್ಲಿ ತಂಗಿದ್ದ ೧ ಸಾವಿರದ ೨೦೨ ಯಾತ್ರಿಕರನ್ನು ಒಳಗೊಂಡ ೨೮ನೇ ಬ್ಯಾಚ್‌ಗೆ ೪೪ ವಾಹನಗಳ ಬೆಂಗಾವಲು ಮೂಲಕ ಜಮ್ಮು ಕಡೆಗೆ ಹೋಗಲು ಅವಕಾಶ ನೀಡಲಾಯಿತು. ಹಿಂದಿರುಗಿದ ಯಾತ್ರಿಕರಲ್ಲಿ ೮೬೭ ಪುರುಷರು, ೨೫೧ ಮಹಿಳೆಯರು, ಒಂದು ಮಗು, ೭೯ ಸಾಧುಗಳು ಮತ್ತು ನಾಲ್ವರು ಸಾಧ್ವಿಗಳು ಸೇರಿದ್ದಾರೆ. ಇದರೊಂದಿಗೆ, ೨೦೨೬ ರ ಯಾತ್ರೆಯಲ್ಲಿ ದರ್ಶನ ಪಡೆದ ಒಟ್ಟು ಯಾತ್ರಿಕರ ಸಂಖ್ಯೆ ೪ ಲಕ್ಷದ ೮೦ ಸಾವಿರ ಮತ್ತು ೧೯ ಕ್ಕೆ ತಲುಪಿದೆ. ೫೭ ದಿನಗಳ ಕಾಲ ನಡೆದ ಅಮರನಾಥ ಯಾತ್ರೆ ಜುಲೈ ೩ ರಂದು ಅನಂತನಾಗ್ ಜಿಲ್ಲೆಯ ಸಾಂಪ್ರದಾಯಿಕ ಚಂದನ್‌ವಾರಿ ಮಾರ್ಗ ಮತ್ತು ಗಂಡರ್‌ಬಾಲ್ ಜಿಲ್ಲೆಯ ಬಾಲ್ಟಾಲ್ ಮಾರ್ಗ ಎರಡರಿಂದಲೂ ಏಕಕಾಲದಲ್ಲಿ ಪ್ರಾರಂಭವಾಯಿತು. ಆಗಸ್ಟ್ ೨೮ ರಂದು ಸಾಂಪ್ರದಾಯಿಕ ಚಾಡಿ ಮುಬಾರಕ್ ಸಮಾರಂಭದೊಂದಿಗೆ ಸಂಪನ್ನಗೊಳ್ಳಲಿದೆ.

**<>><><*><><<>**

ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರು ನವದೆಹಲಿಯಲ್ಲಿ ನಡೆದ 'ಇಂಡಿಯಾ ಮೆಡಿಕಲ್ ಡಿವೈಸ್ ೨೦೨೬' ಕಾರ್ಯಕ್ರಮದಲ್ಲಿ 'ಎಐ ಇನ್ ಮೆಡ್‌ಟೆಕ್: ಕೃತಕ ಬುದ್ಧಿಮತ್ತೆಯ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿ' ಎಂಬ ವರದಿಯನ್ನು ಬಿಡುಗಡೆ ಮಾಡಿದರು. ಆರೋಗ್ಯ ಸಚಿವಾಲಯದ ಪ್ರಕಾರ, ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಅಳವಡಿಕೆಯನ್ನು ವೇಗಗೊಳಿಸಲು ಐದು ಪ್ರಮುಖ ಆದ್ಯತೆಗಳನ್ನು ವರದಿ ವಿವರಿಸಿದೆ. ಕೃತಕ ಬುದ್ಧಿಮತ್ತೆಗೆ ಸಿದ್ಧವಾಗಿರುವ ದತ್ತಾಂಶ ಮತ್ತು ಪುರಾವೆಗಳ ಅಭಿವೃದ್ಧಿ, ಜೀವನಚಕ್ರ ಆಧಾರಿತ ನಿಯಂತ್ರಣ ಮತ್ತು ಮರುಪಾವತಿ ವ್ಯವಸ್ಥೆ, ಎಐ ಆಧಾರಿತ ರೋಗನಿರ್ಣಯ ವ್ಯವಸ್ಥೆಗಳ ವಿಸ್ತರಣೆ ಹಾಗೂ ಸರ್ಕಾರ, ಕೈಗಾರಿಕೆ, ಆರೋಗ್ಯ ಕ್ಷೇತ್ರ ಮತ್ತು ಶೈಕ್ಷಣಿಕ ವಲಯಗಳ ನಡುವಿನ ಸಹಕಾರ ಬಲಪಡಿಸುವುದು ಸೇರಿದಂತೆ ಹಲವು ಅಂಶಗಳನ್ನು ವರದಿ ಒಳಗೊಂಡಿದೆ. ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಸಾಫ್ಟ್‌ವೇರ್ ಸಾಮರ್ಥ್ಯ ಹಾಗೂ ಬೆಳೆಯುತ್ತಿರುವ ಮೆಡ್‌ಟೆಕ್ ಉತ್ಪಾದನಾ ನೆಲೆಯನ್ನು ಬಳಸಿಕೊಂಡು, ಜವಾಬ್ದಾರಿಯುತ ಎಐ ಆಧಾರಿತ ವೈದ್ಯಕೀಯ ತಂತ್ರಜ್ಞಾನ ಕ್ಷೇತ್ರದಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮುವ ಅವಕಾಶ ಭಾರತಕ್ಕಿದೆ ಎಂದು ವರದಿ ತಿಳಿಸಿದೆ.

**<>><><*><><<>**

ಅಸಾನ್‌ನಲ್ಲಿ ನಡೆಯುತ್ತಿರುವ ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಇಂದು ಭಾರತದ ಅಶ್ಮಿತಾ ಚಾಲಿಹಾ ಮತ್ತು ಚೀನಾದ ಕ್ಯೂ ಹಾನ್ ಮುಖಾಮುಖಿಯಾಗಿದ್ದಾರೆ. ಪಂದ್ಯ ಪ್ರಗತಿಯಲ್ಲಿದೆ. ನಿನ್ನೆ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಅಶ್ಮಿತಾ, ಭಾರತದವರೇ ಆದ ರಕ್ಷಿತಾ ರಾಮರಾಜ್ ವಿರುದ್ಧ ೨೧-೧೩, ೧೬-೨೧, ೨೧-೧೩ ಸೆಟ್‌ಗಳ ಅಂತರದಲ್ಲಿ ಗೆಲುವು ದಾಖಲಿಸಿ, ಅಂತಿಮ ಹಂತ ತಲುಪಿದರು.

**<>><><*><><<>**

ಚೀನಾದ ಹೆಫೀಯಲ್ಲಿ ನಡೆದ ೯ನೇ ವರ್ಲ್ಡ್ ಬ್ರಿಡ್ಜ್ ಫೆಡರೇಶನ್ ಯೂತ್ ಟ್ರಾನ್ಸ್‌ನ್ಯಾಷನಲ್ ಚಾಂಪಿಯನ್‌ಶಿಪ್‌ನ ೩೧ ವರ್ಷದೊಳಗಿನವರ ಡಬಲ್ಸ್ ವಿಭಾಗದಲ್ಲಿ ಭಾರತದ ಸಗ್ನಿಕ್ ರಾಯ್ ಮತ್ತು ಸಯಂತನ್ ಕುಶಾರಿ ಚಿನ್ನದ ಪದಕ ಗೆದ್ದರು. ಮೊದಲ ಎಲಿಮಿನೇಷನ್ ಸುತ್ತಿನಲ್ಲಿ, ೩೪ ಜೋಡಿಗಳು ಸ್ಪರ್ಧಿಸಿದ್ದವು. ಭಾರತೀಯ ಜೋಡಿ ಸೇರಿದಂತೆ ಅಗ್ರ ೧೪ ಜೋಡಿಗಳು ಫ್ಲೈಟ್ ಎ ಹಂತಕ್ಕೆ ಮುನ್ನಡೆದವು.

<>><><*><><<>

ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಅವರು, ರಾಜತಾಂತ್ರಿಕತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡುವ ಇರಾನ್‌ನ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ತಮ್ಮ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟವಾದ ಸಂದರ್ಶನವೊಂದರಲ್ಲಿ ಮಸೌದ್ ಅವರು, ಅಮೆರಿಕದೊಂದಿಗೆ ಮಾತುಕತೆ ನಡೆಸುವ ಮತ್ತು ಯುದ್ಧವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಿರುವ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕುವ ಇರಾನ್ ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ. ಒಪ್ಪಂದದ ಅಡಿಯಲ್ಲಿ ಅಮೆರಿಕ ತನ್ನ ಬಾಧ್ಯತೆಗಳನ್ನು ಪೂರೈಸುವವರೆಗೆ ಇರಾನ್ ತನ್ನ ಬದ್ಧತೆಗಳನ್ನು ಗೌರವಿಸುತ್ತದೆ. ಅಮೆರಿಕ ತನ್ನ ಬದ್ಧತೆಗಳನ್ನು ಪೂರೈಸಲು ವಿಫಲವಾದರೆ, ಇರಾನ್ ಪ್ರಕ್ರಿಯೆಯನ್ನು ಮುಂದುವರಿಸಲು ಯಾವುದೇ ಬಾಧ್ಯತೆಯನ್ನು ಹೊಂದಿರುವುದಿಲ್ಲ ಎಂದು ಅವರು ಹೇಳಿದ್ದಾರೆ. ಇರಾನ್‌ನೊಂದಿಗಿನ ಸಂಘರ್ಷ ಶೀಘ್ರದಲ್ಲೇ ಕೊನೆಗೊಳ್ಳಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದ್ದು, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವುದನ್ನು ತಡೆಯಲು ಅಮೆರಿಕ ಬದ್ಧವಾಗಿದೆ ಎಂದು ಪುನರುಚ್ಚರಿಸಿದ್ದಾರೆ.

<>><><*><><<>

ಉದ್ಯೋಗ ಕಳೆದುಕೊಂಡ ಬಳಿಕ ಹೊಸ ಉದ್ಯೋಗ ಹುಡುಕಿಕೊಳ್ಳಲು ವಲಸೆರಹಿತ ವೀಸಾದಡಿ ಅಮೆರಿಕದಲ್ಲಿರುವ ಕೆಲವು ವಿದೇಶಿ ಉದ್ಯೋಗಿಗಳಿಗೆ ನೀಡಲಾಗುವ ೬೦ ದಿನಗಳ ಅವಕಾಶವನ್ನು ರದ್ದುಗೊಳಿಸುವ ಪ್ರಸ್ತಾವನೆಯನ್ನು ಅಮೆರಿಕ ಪರಿಶೀಲಿಸುತ್ತಿದೆ. ಪ್ರಸ್ತಾವನೆ ಜಾರಿಗೆ ಬಂದರೆ, ಉದ್ಯೋಗ ಅಂತ್ಯಗೊಂಡ ಕೂಡಲೇ ಸಂಬಂಧಿತ ಉದ್ಯೋಗಿಗಳು ಅಮೆರಿಕ ತೊರೆಯಬೇಕಾಗಬಹುದು. ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆ ಸಲ್ಲಿಸಿರುವ ಪ್ರಸ್ತಾವನೆ ಪ್ರಸ್ತುತ ಫೆಡರಲ್ ಆಡಳಿತ ಮತ್ತು ಬಜೆಟ್ ಕಚೇರಿ ಪರಿಶೀಲನೆಯಲ್ಲಿದೆ. ಪ್ರಸ್ತಾವನೆಯ ಹೆಚ್ಚಿನ ವಿವರಗಳು ತಕ್ಷಣಕ್ಕೆ ಲಭ್ಯವಾಗಿಲ್ಲ. ಉದ್ಯೋಗ ಕಳೆದುಕೊಂಡ ನಂತರ ಹೊಸ ಉದ್ಯೋಗ ಹುಡುಕುವ ಅವಧಿಯಲ್ಲಿ ವಿದೇಶಿ ಉದ್ಯೋಗಿಗಳು ಹಾಗೂ ಅವರ ಅವಲಂಬಿತರು ಅಮೆರಿಕದಲ್ಲಿ ಉಳಿಯಲು ಅನುಕೂಲವಾಗುವಂತೆ ೬೦ ದಿನಗಳ ಈ ಅವಕಾಶವನ್ನು ೨೦೧೭ರಲ್ಲಿ ಪರಿಚಯಿಸಲಾಗಿತ್ತು.

<>><><*><><<>

ಉತ್ತರಾಖಂಡ ಮತ್ತು ಛತ್ತೀಸ್‌ಗಢದಲ್ಲಿ ಇಂದು ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಭಾರತೀಯ ಹವಾಮಾನ ಇಲಾಖೆ, ಈ ಪ್ರದೇಶಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಿದೆ. ಹರಿಯಾಣ, ಚಂಡೀಗಢ, ಹಿಮಾಚಲ ಪ್ರದೇಶ, ಪಂಜಾಬ್, ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಜಾರ್ಖಂಡ್, ಮಧ್ಯಪ್ರದೇಶ ಮತ್ತು ಈಶಾನ್ಯ ಭಾರತದ ಕೆಲವು ಭಾಗಗಳಲ್ಲಿಯೂ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಕರ್ನಾಟಕ, ಜಮ್ಮು-ಕಾಶ್ಮೀರ, ಆಂಧ್ರಪ್ರದೇಶ, ಕೇರಳ, ಮಾಹೆ, ತಮಿಳುನಾಡು, ಪುದುಚೇರಿ, ಕಾರೈಕಲ್, ಲಕ್ಷದ್ವೀಪ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಇಂದು ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**